


بسم الله الرّحمٰن الرّحيم

# ಬದ್ರ್ ಯುದ್ಧ – ಯುದ್ಧದ ಅಂತಿಮ ತಯಾರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30-06-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರೊಂದಿಗೆ ಸುವಾದ್ ಬಿನ್ ಗ಼ಝಿಯ್ಯರಿಗೆ ಇದ್ದ ಪ್ರೀತಿಯ ಆಶ್ಚರ್ಯಕರವಾದ ಘಟನೆಯನ್ನು ಕಳೆದ ಖುತ್ಬದಲ್ಲಿ ಹೇಳಲಾಗಿತ್ತು. ಇದರ ಕುರಿತು ಹೆಚ್ಚಿನ ವಿವರಣೆ ಹೀಗಿದೆ: ಸುವಾದ್ ಬಿನ್ ಗ಼ಝಿಯ್ಯ ವಿಜಯಿಯಾಗಿ ಯುದ್ಧದಿಂದ ಮರಳುವಾಗ ಮುಶ್ರಿಕರಲ್ಲಿ ಒಬ್ಬ ವ್ಯಕ್ತಿಯಾದ ಖ಼ಾಲಿದ್ ಬಿನ್ ಹಿಶಾಮ್‌ರನ್ನು ಕೈದಿ ಕೂಡ ಮಾಡಿದರು. ಅನಂತರ ಖೈಬರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ) ಸುವಾದ್‌ರನ್ನು ಯುದ್ಧ ಸಂಪತ್ತನ್ನು ಸಂಗ್ರಹಿಸಲು ಅಧಿಕಾರಿಯನ್ನಾಗಿ ನೇಮಿಸಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯನ್ನು ಈ ರೀತಿಯಾಗಿ ವಿವರಿಸಿರುವರು: ಹಿಜರೀ 2, ರಮಝಾನ್ ತಿಂಗಳ 17ನೇ ತಾರೀಕು, ಜುಮಾ ದಿವಸವಾಗಿತ್ತು. ಬೆಳಿಗ್ಗೆ ಎದ್ದು ಮೊತ್ತಮೊದಲು ನಮಾಝ್ ನಿರ್ವಹಿಸಲಾಯಿತು. ಅನಂತರ ಹಝ್ರತ್ ಪೈಗಂಬರ್(ಸ) ಜಿಹಾದಿನ ಬಗ್ಗೆ ಒಂದು ಖುತ್ಬ ನೀಡಿದರು. ಅನಂತರ ಸ್ವಲ್ಪ ಬೆಳಕು ಬಂದಾಗ ಅವರು ಒಂದು ಬಾಣದಿಂದ ಮುಸ್ಲಿಮರ ಪಂಕ್ತಿಗಳನ್ನು ಸರಿಪಡಿಸಲು ತೊಡಗಿದರು. ಸುವಾದ್ ಎಂಬ ಹೆಸರಿನ ಒಬ್ಬ ಸಹಾಬಿ ಪಂಕ್ತಿಯಿಂದ ಸ್ವಲ್ಪ ಮುಂದೆಯಾಗಿ ನಿಂತಿದ್ದರು. ಬಾಣದಿಂದ ಮುಟ್ಟಿಕೊಂಡು ಅವರೊಡನೆ ಹಿಂದಕ್ಕೆ ಸರಿಯಲು ಹಝ್ರತ್ ಪೈಗಂಬರ್(ಸ) ಹೇಳಿದರು. ಆಕಸ್ಮಿಕವಾಗಿ ಬಾಣದ ಹಿಡಿ ಅವರ ಎದೆಗೆ ತಗುಲಿತು. ಆಗ ಅವರು ಧೈರ್ಯದಿಂದ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ನಿಮ್ಮನ್ನು ಸತ್ಯ ಮತ್ತು ನ್ಯಾಯದೊಂದಿಗೆ ಕಳುಹಿಸಿರುವನು. ಆದರೆ ನೀವು ನನ್ನನ್ನು ಅನ್ಯಾಯವಾಗಿ ಬಾಣದಿಂದ ನೋಯಿಸಿದ್ದೀರಿ. ಅಲ್ಲಾಹನಾಣೆ ನಾನು ಇದರ ಸೇಡು ತೀರಿಸುವೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸರಿ ಸುವಾದ್, ನೀನು ಕೂಡ ನನ್ನನ್ನು ಬಾಣದಿಂದ ನೋಯಿಸು. ಹೀಗೆ ಹೇಳಿಕೊಂಡು ಹಝ್ರತ್ ಪೈಗಂಬರ್(ಸ) ತನ್ನ ಎದೆಯಿಂದ ಅಂಗಿಯನ್ನು ನೀಗಿಸಿದರು. ಸುವಾದಿಗೆ ಏನಾಯಿತು ಎಂದು ಯೋಚಿಸಿ ಸಹಾಬಿಯರು ಚಿಂತಿತರಾದರು. ಸುವಾದ್ ಪ್ರೀತಿ ಮತ್ತು ಸಂತೋಷದಿಂದ ಹಝ್ರತ್ ಪೈಗಂಬರ್(ಸ)ರ ಎದೆಯನ್ನು ಚುಂಬಿಸಿದರು. ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಾ ಕೇಳಿದರು: ಸುವಾದ್, ನಿನಗೆ ಇಂತಹ ಯೋಚನೆ ಬರಲು ಕಾರಣವೇನು? ಅವರು ಬಹಳ ನೋವಿನಿಂದ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಶತ್ರುಗಳು ಮುಂದೆ ಇರುವರು. ನಾವು ಇಲ್ಲಿಂದ ಬಚಾವಾಗಿ ಮರಳಿ ಹೋಗುವೆವೋ ಇಲ್ಲವೋ ಎಂದು ಗೊತ್ತಿಲ್ಲ. ಶಹಾದತಿಗೆ ಮುಂಚೆ ನಿಮ್ಮ ಶರೀರವನ್ನು ನನ್ನ ಶರೀರದಿಂದ ಸ್ಪರ್ಶಿಸಲು ನಾನು ಬಯಸಿದೆ.

ಹಝ್ರತ್ ಪೈಗಂಬರ್(ಸ) ಪಂಕ್ತಿಗಳನ್ನು ಸರಿಪಡಿಸಿದ ನಂತರ ಹೇಳಿದರು: ನಾನು ಆಜ್ಞೆ ನೀಡುವ ವರೆಗೂ ಶತ್ರುಗಳ ಮೇಲೆ ನೀವು ದಾಳಿ ಮಾಡಬಾರದು. ಶತ್ರುಗಳು ಹೆಚ್ಚು ಸಮೀಪಕ್ಕೆ ಬರುವ ತನಕ ಖಡ್ಗ ಪ್ರಯೋಗ ನಡೆಸಬೇಡಿರಿ. ಜಿಹಾದ್ ಮತ್ತು ಸಹನೆ ಕೈಗೊಳ್ಳುವುದರ ಬಗ್ಗೆ ಖುತ್ಬದಲ್ಲಿ ಹಝ್ರತ್ ಪೈಗಂಬರ್(ಸ) ಉಪದೇಶ ನೀಡಿದರು. ಅವರು ಹೇಳಿದರು: ವಿಪತ್ತಿನ ಸಮಯದಲ್ಲಿ ಸಹನೆ ಕೈಗೊಳ್ಳುವಾಗ ಅಲ್ಲಾಹನು ಕಷ್ಟತೆಗಳನ್ನು ದೂರ ಮಾಡುವನು ಮತ್ತು ದುಃಖದಿಂದ ಮೋಕ್ಷ ನೀಡುವನು.

ಹಝ್ರತ್ ಪೈಗಂಬರ್(ಸ) ನೀಡಿದ ಆ ಖುತ್ಬದ ವಿವರಣೆ ಒಂದೆಡೆ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗೆ ಸ್ತುತಿ ಅರ್ಪಿಸಿ ಅವನ ಪರಿಶುದ್ಧಿಯನ್ನು ಕೊಂಡಾಡಿದ ನಂತರ ಹೀಗೆ ಹೇಳಿದರು: ಅಲ್ಲಾಹನು ಹುರಿದುಂಬಿಸಿದ ಕಾರ್ಯಗಳ ಬಗ್ಗೆ ನಾನು ನಿಮ್ಮನ್ನು ಸಹ ಹುರಿದುಂಬಿಸುತ್ತೇನೆ. ಅಲ್ಲಾಹನು ನಿಷೇಧಿಸಿದ ಕಾರ್ಯದಿಂದ ನಿಮ್ಮನ್ನು ತಡೆಯುತ್ತೇನೆ. ಶ್ರೇಷ್ಠನೂ ಅತ್ಯುನ್ನತನೂ ಆದ ಅಲ್ಲಾಹನು ನಿಮ್ಮೊಡನೆ ಸತ್ಯವನ್ನು ಹೇಳಲು ಆದೇಶಿಸುತ್ತಾನೆ. ಅವನು ಸತ್ಯವನ್ನು ಇಷ್ಟಪಡುತ್ತಾನೆ. ಅವನು ಸಜ್ಜನರಿಗೆ ಉನ್ನತ ಪದವಿಗಳನ್ನು ದಯಪಾಲಿಸುತ್ತಾನೆ. ಕಠಿಣ ಪರಿಸ್ಥಿತಿಗಳಲ್ಲಿ ಸಹನೆದೋರುವುದರಿಂದ ದುಃಖ ದೂರವಾಗುತ್ತದೆ. ಸಹನೆ ಕೈಗೊಳ್ಳುವುದರ ಮೂಲಕ ಪರಲೋಕದಲ್ಲಿ ಮೋಕ್ಷ ಲಭಿಸುವುದು. ಅಲ್ಲಾಹನ ಅನಿಷ್ಟತೆ ನಿಮ್ಮ ಪರಸ್ಪರ ಕೋಪಕ್ಕಿಂತ ಬಹಳ ದೊಡ್ಡ ಸಂಗತಿಯಾಗಿದೆ. ಅಲ್ಲಾಹನು ದೈವಿಕ ಗ್ರಂಥದಲ್ಲಿ ಆದೇಶ ನೀಡಿದ ಸಂಗತಿಯ ಬಗ್ಗೆ ಗಮನವಿರಿಸಿರಿ. ಅವನು ನಿಮಗೆ ತನ್ನ ಅದ್ಭುತ ದೃಷ್ಟಾಂತಗಳನ್ನು ತೋರಿಸಿರುವನು ಮತ್ತು ಅಪಮಾನದ ನಂತರ ಗೌರವವನ್ನು ನೀಡಿರುವನು. ಅಲ್ಲಾಹನು ನಿಮ್ಮೊಂದಿಗೆ ಸಂಪ್ರೀತನಾಗಲು ಅವನ ಕೈಯನ್ನು ಗಟ್ಟಿಯಾಗಿ ಹಿಡಿಯಿರಿ. ಈಗ ಬಂದಿರುವ ಪ್ರಭುವಿನ ಪರೀಕ್ಷೆಯಲ್ಲಿ ನೀವು ತೇರ್ಗಡೆ ಪಡೆಯಿರಿ. ಹಾಗಾದರೆ, ಅವನು ನಿಮಗೆ ವಾಗ್ದಾನ ಮಾಡಿದ ಕಾರುಣ್ಯ ಮತ್ತು ಕ್ಷಮಾಪಣೆಗೆ ನೀವು ಹಕ್ಕುದಾರರಾಗುವಿರಿ. ಅವನ ವಾಗ್ದಾನ ಮತ್ತು ಮಾತು ಸತ್ಯ. ಅವನ ಶಿಕ್ಷೆ ಕಠಿಣ. ಜೀವಂತನೂ ಎಲ್ಲರನ್ನು ನೆಲೆನಿಲ್ಲಿಸುವವನೂ ಆದ ಅಲ್ಲಾಹನ ಜೊತೆಗೆ ನಾನು ಮತ್ತು ನೀವು ಇದ್ದೇವೆ. ನಮ್ಮ ವಿಜಯಕ್ಕಾಗಿ ನಾವು ಅವನೊಡನೆ ದುಆ ಮಾಡುತ್ತೇವೆ ಮತ್ತು ಅವನ ಆಶ್ರಯವನ್ನು ಪಡೆಯುತ್ತೇವೆ. ಅವನ ಮೇಲೆ ಭರವಸೆ

ಹೊಂದುತ್ತೇವೆ ಮತ್ತು ಅವನ ಬಳಿಗೆ ಮರಳಿ ಹೋಗಲಿದ್ದೇವೆ. ಅಲ್ಲಾಹನು ನಮ್ಮನ್ನು ಮತ್ತು ಮುಸ್ಲಿಮರನ್ನು ಕ್ಷಮಿಸಲಿ.

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ – ಯುದ್ಧದಂದು ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಬನೂ ಹಾಶಿಂ ಗೋತ್ರ ಮತ್ತು ಕೆಲವು ಇತರ ಜನರು ಮುಶ್ರಿಕರ ಜೊತೆಗೆ ಒತ್ತಡಕ್ಕೆ ಮಣಿದು ಬಂದಿರುವರು. ಅವರು ನಮ್ಮ ವಿರುದ್ಧ ಯುದ್ಧ ಮಾಡಲು ಬಯಸುತ್ತಿಲ್ಲ. ಆದ್ದರಿಂದ ನಿಮ್ಮಲ್ಲಿ ಯಾರಾದರೂ ಬನೂ ಹಾಶಿಂ ಗೋತ್ರದ ಯಾರನ್ನಾದರೂ ಕಂಡರೆ ಅವರನ್ನು ವಧಿಸಬೇಡಿರಿ. ಅಬುಲ್ ಬಖ್ತರಿಯನ್ನು ಕಂಡರೆ ಅವರನ್ನು ವಧಿಸಬೇಡಿರಿ. ಅಬ್ಬಾಸ್ ಬಿನ್ ಅಬ್ದುಲ್‌ಮುತ್ತಲಿಬ್‌ರನ್ನು ಕಂಡರೆ ಅವರನ್ನು ಕೂಡ ವಧಿಸಬೇಡಿರಿ. ಅದೇ ರೀತಿಯಲ್ಲಿ ಮಕ್ಕದಲ್ಲಿ ನಮಗೆ ವಿಪತ್ತು ಬಂದಾಗ ನಮ್ಮೊಡನೆ ಸಭ್ಯವಾಗಿ ವರ್ತಿಸಿದ ಕೆಲವು ಜನರು ಶತ್ರು ಸೈನ್ಯದಲ್ಲಿ ಇದ್ದಾರೆ. ಮಕ್ಕದಲ್ಲಿ ಮುಸ್ಲಿಮರ ಜೊತೆಗೆ ಅವರು ತೋರಿಸಿದ ಸಭ್ಯತೆ ಮತ್ತು ಔದಾರ್ಯಕ್ಕೆ ಪ್ರತಿಫಲ ನೀಡುವುದು ನಮಗೆ ಕಡ್ಡಾಯವಾಗಿದೆ. ಆದ್ದರಿಂದ ಅಂತಹ ವ್ಯಕ್ತಿಯ ಮೇಲೆ ಯಾವನೇ ಮುಸ್ಲಿಮನು ಮೇಲುಗೈ ಸಾಧಿಸಿದರೆ ಅವರಿಗೆ ಯಾವುದೇ ವಿಧದ ತೊಂದರೆ ಕೊಡಬೇಡಿರಿ. ಆಗ ಹಝ್ರತ್ ಅಬೂ ಹುಧೈಫ ಹೇಳಿದರು: ನಾವು ನಮ್ಮ ಸಹೋದರರನ್ನು ಮತ್ತು ಸಂಬಂಧಿಕರನ್ನು ವಧಿಸುತ್ತಿರುವಾಗ ಅಬ್ಬಾಸ್‌ರನ್ನು ಏಕೆ ವಧಿಸಬಾರದು. ಅನಂತರದ ಕಾಲದಲ್ಲಿ ಹಝ್ರತ್ ಅಬೂಹುಧೈಫ(ರ) ತಾನು ಹೇಳಿದ ಈ ಮಾತಿನ ಬಗ್ಗೆ ಬಹಳ ದುಃಖಿಸುತ್ತಿದ್ದರು. ಶಹಾದತ್ ಪಡೆಯುವುದು ಮಾತ್ರವೇ ಈ ತಪ್ಪಿಗೆ ಇರುವ ಪ್ರಾಯಶ್ಚಿತ್ತವೆಂದು ಅವರು ಹೇಳುತ್ತಿದ್ದರು. ಅನಂತರ ಹಝ್ರತ್ ಅಬೂಹುಧೈಫ(ರ) ಯಮಾಮ ಯುದ್ಧದಲ್ಲಿ ಶಹೀದ್ ಆದರು.

ಈ ನಿರ್ದೇಶನಗಳನ್ನು ನೀಡಿದ ನಂತರ ಹಝ್ರತ್ ಪೈಗಂಬರ್(ಸ) ಪುನಃ ಡೇರೆಗೆ ಹೋದರು ಮತ್ತು ದುಆ ಮಾಡುವುದರಲ್ಲಿ ತಲ್ಲೀನರಾದರು. ಕಿಬ್ಲದ ಕಡೆಗೆ ಮುಖ ಮಾಡಿಕೊಂಡು ಹಝ್ರತ್ ಪೈಗಂಬರ್(ಸ) ಉಚ್ಚ ಸ್ವರದಲ್ಲಿ ತನ್ನ ಪ್ರಭುವನ್ನು ಕರೆಯುತ್ತಿದ್ದರು. ಎಷ್ಟರವರೆಗೆಂದರೆ ಅವರ ಹೊದಿಕೆ ಅವರ ತೋಳುಗಳಿಂದ ಕೆಳಗೆ ಬಿತ್ತು. ಹಝ್ರತ್ ಅಬೂಬಕರ್(ರ) ಅವರ ಸಮೀಪಕ್ಕೆ ಹೋಗಿ ಅವರ ಹೊದಿಕೆಯನ್ನು ಎತ್ತಿಕೊಂಡು ಪುನಃ ಅವರ ತೋಳುಗಳ ಮೇಲೆ ಹಾಕಿದರು. ಅನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರನ್ನು ಹಿಂದಿನಿಂದ ಅಪ್ಪಿಕೊಂಡು ಹೀಗೆ ಹೇಳಿದರು: ಹೇ ಅಲ್ಲಾಹನ ಪ್ರವಾದಿ, ನೀವು ಪ್ರಭುವಿನೊಡನೆ ಮಾಡಿದ ಈ ಪ್ರಾರ್ಥನೆಯೇ ಸಾಕು. ಅವನು ನಿಮ್ಮೊಡನೆ ಮಾಡಿದ ವಾಗ್ದಾನಗಳನ್ನು ಖಂಡಿತ ಈಡೇರಿಸುವನು.

ಸತ್ಯನಿಷೇಧಿಗಳು ಒಟ್ಟಾಗಿ ದಾಳಿ ನಡೆಸಿದಾಗ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಸನ್ನಿಧಿಯಲ್ಲಿ ಬಹಳ ನೋವಿನಿಂದ ಹೀಗೆ ದುಆ ಮಾಡಿದರು: "ಹೇ ನನ್ನ ಅಲ್ಲಾಹ್, ನಿನ್ನ ವಾಗ್ದಾನಗಳನ್ನು ಈಡೇರಿಸು. ನನ್ನ ಯಜಮಾನನೇ, ಮುಸ್ಲಿಮರ ಈ ಸಂಘ ಇಂದು ನಾಶವಾದರೆ, ಲೋಕದಲ್ಲಿ ನಿನ್ನನ್ನು ಆರಾಧಿಸಲು ಬೇರೆ ಯಾರೂ ಇರಲಾರರು." ಈ ಪ್ರಾರ್ಥನೆಯ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಎಷ್ಟು ಕಳವಳದಿಂದ ಇದ್ದರು ಎಂದರೆ, ಅವರು ಕೆಲವೊಮ್ಮೆ ಸಾಷ್ಟಾಂಗ ಮಾಡುತ್ತಾ ಕೆಲವೊಮ್ಮೆ ನಿಂತುಕೊಂಡು ಅಲ್ಲಾಹನನ್ನು ಕರೆಯುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯನಿಷೇಧಿಗಳ ಮೇಲೆ ಹಝ್ರತ್ ಪೈಗಂಬರ್(ಸ)ರಿಗೆ ವಿಜಯ ನೀಡುವುದಾಗಿ ಪವಿತ್ರ ಖುರ್‌ಆನಿನಲ್ಲಿ ಪದೇ ಪದೇ ವಾಗ್ದಾನ ನೀಡಲಾಗಿತ್ತು. ಆದರೂ ಇಸ್ಲಾಮಿನ ಮೊದಲ ಯುದ್ಧವಾದ ಬದ್ರ್ ಕದನ ಶುರುವಾದಾಗ ಹಝ್ರತ್ ಪೈಗಂಬರ್(ಸ) ಅಳುವುದನ್ನು ಮತ್ತು ದುಆ ಮಾಡುವುದನ್ನು ಆರಂಭಿಸಿದರು. ಅಳುತ್ತಾ ಅವರ ನಾಲಗೆಯಿಂದ ಹೀಗೊಂದು ವಾಕ್ಯ ಹೊರಟಿತು: ಹೇ ನನ್ನ ಪ್ರಭೂ, ಕೇವಲ ಮುನ್ನೂರ ಹದಿಮೂರು ವ್ಯಕ್ತಿಗಳನ್ನು ಹೊಂದಿರುವ ಈ ಸಂಘವನ್ನು ಇಂದು ನೀನು ನಾಶ ಮಾಡಿದರೆ, ಕೊನೆಗಾಲದ ವರೆಗೆ ನಿನ್ನನ್ನು ಯಾರೂ ಆರಾಧಿಸಲಾರರು.

ಹಝ್ರತ್ ಪೈಗಂಬರ್(ಸ) ಚಪ್ಪರದಲ್ಲಿ ಪ್ರಾರ್ಥಿಸುತ್ತಿದ್ದಾಗ ಅವರಿಗೆ ತೂಕಡಿಕೆ ಬಂತು. ಅನಂತರ ಅಚಾನಕ್ಕಾಗಿ ಎಚ್ಚರಗೊಂಡು ಹೀಗೆ ಹೇಳಿದರು: ಹೇ ಅಬೂಬಕರ್, ಖುಶಿಪಡು. ನಿಮ್ಮ ಪರಿಪಾಲಕನ ಸಹಾಯ ಬಂದಿದೆ. ನೋಡಿರಿ, ಜಿಬ್ರೀಲ್ ತನ್ನ ಕುದುರೆಯ ಲಗಾಮು ಹಿಡಿದುಕೊಂಡು ಅದನ್ನು ಚಲಾಯಿಸುತ್ತಿದ್ದಾರೆ. ಅದರ ಕಾಲುಗಳಲ್ಲಿ ಧೂಳಿನ ಗುರುತುಗಳಿವೆ.

ಬದ್ರ್ ಮೈದಾನದಲ್ಲಿ ಹಝ್ರತ್ ಪೈಗಂಬರ್(ಸ) ಝುಬೈರ್ ಬಿನ್ ಅವಾಮ್(ರ)ರನ್ನು ಬಲಭಾಗದ, ಮಿಖ್‌ದಾದ್ ಬಿನ್ ಅಮ್ರ್(ರ)ರನ್ನು ಎಡಭಾಗದ ಮತ್ತು ಖೈಸ್(ರ)ರನ್ನು ಕಾಲಾಳು ಸೈನ್ಯದ ನಾಯಕರನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್(ಸ) ಯುದ್ಧದ ಸೇನಾಧಿಪತಿಯಾಗಿದ್ದರು. ಅವರು ಮುಂದಿನ ಪಂಕ್ತಿಗಳಲ್ಲಿ ಇದ್ದರು. ಹಝ್ರತ್ ಅಲಿ(ರ) ಹೇಳುತ್ತಾರೆ: ನಾವು ಯುದ್ಧದಂದು ಹಝ್ರತ್ ಪೈಗಂಬರ್(ಸ)ರ ಆಶ್ರಯ ಪಡೆಯುತ್ತಿದ್ದೆವು. ಹಝ್ರತ್ ಪೈಗಂಬರ್(ಸ) ಶತ್ರುಗಳಿಗೆ ಬಹಳ ಸಮೀಪವಾಗಿ ಇದ್ದರು. ಎಲ್ಲ ಯೋಧರಿಗಿಂತ ಉತ್ತಮವಾಗಿ ಹಝ್ರತ್ ಪೈಗಂಬರ್(ಸ) ಯುದ್ಧ ಮಾಡುತ್ತಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಉಬಯ ಸೈನ್ಯಗಳು ಎದುರುಬದುರಾಗಿ ಬಂದಾಗ ದೈವಿಕ ಶಕ್ತಿಯ ವಿಸ್ಮಯಕರವಾದ ಪ್ರಕಟಣೆ ಉಂಟಾಯಿತು. ಆ ಸಮಯದಲ್ಲಿ ಮುಸ್ಲಿಂ ಸೇನೆ ನಿಂತಿದ್ದ ಕ್ರಮ ಹೇಗಿತ್ತು ಎಂದರೆ, ಮುಸ್ಲಿಮರ ಸೈನ್ಯ ಖುರೈಶಿಯರ ಕಣ್ಣಿಗೆ ದುಪ್ಪಟ್ಟು ಸಂಖ್ಯೆಯಲ್ಲಿ ತೋರುತ್ತಿತ್ತು. ಮತ್ತೊಂದೆಡೆ ಖುರೈಶಿಯರ ಸೈನ್ಯ ಮುಸ್ಲಿಮರಿಗೆ ಅದರ ಯಥಾರ್ಥ ಸಂಖ್ಯೆಗಿಂತ ಕಡಿಮೆಯಾಗಿ ತೋರುತ್ತಿತ್ತು. ಮುಸ್ಲಿಂ ಸೇನಾಬಲದ ಸರಿಯಾದ ಮಾಹಿತಿಯನ್ನು ಪಡೆಯಲು ಖುರೈಶಿ ಸರದಾರ ಉಮೈರ್ ಬಿನ್ ವಹಬ್ ಎಂಬಾತನನ್ನು ಕಳುಹಿಸಿದನು. ಉಮೈರನಿಗೆ ಮುಸ್ಲಿಮರ ಬಗ್ಗೆ ಎಷ್ಟು ಭಯ ಮತ್ತು ಹೆದರಿಕೆ ಉಂಟಾಯಿತು ಎಂದರೆ, ಅವನು ಬಹಳ ನಿರಾಶೆಯಿಂದ ಸತ್ಯನಿಷೇಧಿಗಳ ಕಡೆಗೆ ಮರಳಿ ಖುರೈಶಿಯರನ್ನು ಸಂಬೋಧಿಸುತ್ತಾ ಹೀಗೆ ಹೇಳಿದನು: ಎಲೈ ಖುರೈಶೀ

ಸಮೂಹವೇ, ಮುಸ್ಲಿಮರ ಸೈನ್ಯದಲ್ಲಿ ಒಂಟೆಗಳು, ವ್ಯಕ್ತಿಗಳ ಬದಲಾಗಿ ಮೃತದೇಹಗಳನ್ನು ಎತ್ತಿಕೊಂಡಿದ್ದಾಗಿ ನಾನು ನೋಡಿರುವೆನು. (ಎಂದರೆ ಅವರು ಸಾಯಲು ತಯಾರಾಗಿ ಬಂದಿರುವರು ಎಂದರ್ಥ) ಇದನ್ನು ಕೇಳಿದಾಗ ಖುರೈಶಿಗಳಲ್ಲಿ ಕಳವಳ ಹರಡಿತು.

ಈ ಮಾತನ್ನು ಹಕೀಂ ಬಿನ್ ಹಝ್ಝಾಂ ಆಲಿಸಿದಾಗ ಅವನು ಉತ್ಬ ಬಿನ್ ರಬೀಅನ ಬಳಿಗೆ ಹೋದನು ಮತ್ತು ಮರಳಿ ಹೋಗುವಂತೆ ಸಲಹೆ ನೀಡಿದನು. ಉತ್ಬ ಸ್ವತಃ ಭಯದಲ್ಲಿದ್ದನು. ಅವನು ಈ ಸಲಹೆಯನ್ನು ಇಷ್ಟಪಟ್ಟನು ಮತ್ತು ಹಕೀಮ್‌ನೊಡನೆ ಹೀಗೆ ಹೇಳಿದನು: ನಾವು ಮತ್ತು ಮುಸ್ಲಿಮರು ಪರಸ್ಪರ ಸಂಬಂಧಿಕರು. ಒಬ್ಬ ಸಹೋದರ ಮತ್ತೊಬ್ಬ ಸಹೋದರನ ಮೇಲೆ ಖಡ್ಗವೆತ್ತುವುದು ಸರಿಯೇ? ಆದ್ದರಿಂದ ನೀನು ಅಬೂಜಹಲಿನ ಬಳಿಗೆ ಹೋಗಿ ಈ ಸಲಹೆಯನ್ನು ಅವನ ಮುಂದಿರಿಸು. ಹಕೀಂ ಬಿನ್ ಹಝ್ಝಾಂ ಈ ಸಲಹೆಯನ್ನು ಅಬೂಜಹಲನ ಮುಂದಿರಿಸಿದಾಗ ಅವನು ಕೂಡಲೇ ಹೀಗೆ ಹೇಳಿದನು: ಸರಿ, ಸರಿ. ಈಗ ಉತ್ಬ ತನ್ನ ಸಂಬಂಧಿಕರನ್ನು ಕಾಣಲು ತೊಡಗಿದ್ದಾನೆ. ಅನಂತರ ಅಬೂಜಹಲ್ ಈ ಸಲಹೆಯನ್ನು ಎಷ್ಟು ಕುಯುಕ್ತಿಯಿಂದ ತಿರಸ್ಕರಿಸಿದನು ಎಂದರೆ, ಸತ್ಯನಿಷೇಧಿಗಳ ಮನಸ್ಸಿನಲ್ಲಿ ವೈರದ ಬೆಂಕಿ ವರ್ಧಿಸಿತು. ಯುದ್ಧದ ಒಲೆ ಶಕ್ತವಾಗಿ ಉರಿಯತೊಡಗಿತು.

(ಈ ವಿಷಯ ಮುಂದುವರೆಯುವುದು ಎಂದು ಹುಝೂರ್ ಖುತ್ಬದ ಕೊನೆಯಲ್ಲಿ ಹೇಳಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔

***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak',** Islamabad, Tilford, UK. On 30-06-2023*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon